Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
ವಿಶೇಷ ಸಂಚಿಕೆ

भाग–IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1<br>No. 1<br>ಸಂಖ್ಯೆ ೧ | नई दिल्ली सोमवार, नोव्हेंबर 10, 1986<br>New Delhi Monday, November 10, 1986<br>ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | कार्तिक 19, 1908 (शक)<br>Karthika 19, 1908 (Saka)<br>ಕಾರ್ತೀಕ ೧೯, ೧೯೦೮ (ಶಕ) | खण्ड–4<br>Vol. 4<br>ಸಂಪುಟ ೪ |

## MINISTRY OF LAW AND JUSTICE

### (Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely — (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಜನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಜಾತಿ ಸಂಬಂಧದ ಅಸಮರ್ಥತೆಗಳ ನಿವಾರಣೆ ಅಧಿನಿಯಮ, 1850

## (1850ರ ಅಧಿನಿಯಮ ಸಂಖ್ಯೆ 21)

[11ನೇ ಏಪ್ರಿಲ್, 1850]

**1832ರ ಬಂಗಾಳ ಸಂಹಿತೆಯ VIIನೇ ವಿನಿಯಮದ 9ನೇ ಪ್ರಕರಣದ ತತ್ವಗಳನ್ನು ಭಾರತದಾದ್ಯಂತ ವ್ಯಾಪ್ತಗೊಳಿಸುವ ಒಂದು ಅಧಿನಿಯಮ.**

**ಪ್ರಸ್ತಾವನೆ.–** 1832ರ ಬಂಗಾಳ ಸಂಹಿತೆಯ VIIನೇ ವಿನಿಯಮದ 9ನೇ ಪ್ರಕರಣದ (1832ರ ಬಂಗಾಳ ವಿನಿಯಮ VII) ಮೂಲಕ "ಯಾವುದೇ ಸಿವಿಲ್ ದಾವೆಯಲ್ಲಿ ಅಂಥ ದಾವೆಯ ಪಕ್ಷಕಾರರು ಬೇರೆ ಬೇರೆ ಧರ್ಮದವರಾಗಿದ್ದು ಒಬ್ಬ ಪಕ್ಷಕಾರನು ಹಿಂದೂ ಧರ್ಮದವನು ಮತ್ತೊಬ್ಬ ಪಕ್ಷಕಾರನು ಮಹಮದೀಯ ಧರ್ಮದವನು ಆಗಿದ್ದಾಗ, ಅಥವಾ ದಾವೆಯ ಒಬ್ಬ ಅಥವಾ ಹೆಚ್ಚು ಪಕ್ಷಕಾರರು ಮಹಮದೀಯ ಅಥವಾ ಹಿಂದೂ ಧರ್ಮದವರಾಗಿರದಿದ್ದಲ್ಲಿ, ಅಂಥ ಧರ್ಮಗಳ ಕಾನೂನುಗಳು, ಅಂಥ ಕಾನೂನುಗಳು ಪ್ರವರ್ತನೆಗೊಳ್ಳದಿದ್ದಿದ್ದರೆ, ಅಂಥ ಪಕ್ಷಕಾರನನ್ನು ಅಥವಾ ಪಕ್ಷಕಾರರನ್ನು, ಅವರು ಹಕ್ಕುಳ್ಳವರಾಗಿರುತ್ತಿದ್ದ ಯಾವುದೇ ಸ್ವತ್ತಿನಿಂದ ವಂಚಿತರನ್ನಾಗಿ ಮಾಡುವಂತೆ ಪ್ರವರ್ತನೆಗೊಳ್ಳಲು ಅನುಮತಿಸತಕ್ಕದ್ದಲ್ಲ" ಎಂಬುದಾಗಿ ಅಧಿನಿಯಮಿಸಲಾಗಿರುವುದರಿಂದ; ಮತ್ತು ಭಾರತದಾದ್ಯಂತ ಆ ಅಧಿನಿಯಮದ ತತ್ವವನ್ನು ವ್ಯಾಪ್ತಗೊಳಿಸುವುದು ಪ್ರಯೋಜನಕಾರಿಯಾಗಿರುವುದರಿಂದ, ಅದನ್ನು ಈ ಮುಂದಿನಂತೆ ಅಧಿನಿಯಮಿಸಲಾಗಿದೆ:–

1. **ಧರ್ಮಪರಿವರ್ತನೆ ಅಥವಾ ಜಾತಿ ಕೆಟ್ಟದ್ದರಿಂದಾಗಿ ಹಕ್ಕುಗಳನ್ನು ಮುಟ್ಟುಗೋಲು ಹಾಕುವ, ಅಥವಾ ಅವುಗಳಿಗೆ ಬಾಧಕವಾಗುವ ಕಾನೂನು ಅಥವಾ ಆಚರಣೆಯ ಜಾರಿ ನಿಂತುಹೋಗುವುದು.–** ಈಗ ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಅಥವಾ ಆಚರಣೆಯು ಯಾರೇ ವ್ಯಕ್ತಿಯು ಅವನು/ಅವಳು ಯಾವುದೇ ಧರ್ಮವನ್ನು ಪರಿತ್ಯಜಿಸಿದ್ದಾನೆ/ಳೆ ಅಥವಾ ಯಾವುದೇ ಧರ್ಮದ ಸಂಸರ್ಗದಿಂದ ಅವನನ್ನು / ಅವಳನ್ನು ಹೊರಗಿರಿಸಲಾಗಿದೆ ಅಥವಾ ಜಾತಿಯಿಂದ ಹೊರಹಾಕಲಾಗಿದೆ ಎಂಬ ಕಾರಣದಿಂದ ಅವನ / ಅವಳ ಮೇಲೆ ಹಕ್ಕುಗಳ ಅಥವಾ ಸ್ವತ್ತಿನ ಮುಟ್ಟುಗೋಲನ್ನು ವಿಧಿಸಿದರೆ ಅಥವಾ ವಾರಸುದಾರಿಕೆಯ ಯಾವುದೇ ಹಕ್ಕನ್ನು ದುರ್ಬಲಗೊಳಿಸಿದರೆ ಅಥವಾ ಅದರ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡಿದರೆ ಅಂಥ ಕಾನೂನನ್ನು ಅಥವಾ ಆಚರಣೆಯನ್ನು ಆ ಮಟ್ಟಿಗೆ ಯಾವುದೇ ನ್ಯಾಯಾಲಯದಲ್ಲಿ ಕಾನೂನಾಗಿ ಜಾರಿಗೊಳಿಸುವುದು ನಿಂತುಹೋಗತಕ್ಕದ್ದು.

**2. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ಜಾತಿ ಸಂಬಂಧದ ಅಸಮರ್ಥತೆಗಳ ನಿವಾರಣೆ ಅಧಿನಿಯಮ, 1850 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.